ಯಮನೂರಪ್ಪನ ಅಪ್ಪ, ಅವ್ವನ ಮುಖದಲ್ಲಿ ಖುಷಿಯ ನವಿಲು ಪುಕ್ಕ ಬಿಚ್ಚಿತು. 'ಆಯ್ತುಂಗರ ಈ ವರ್ಷ ಬಸವ ಜಯಂತಿಗೆ ಮದುವಿ ಮಾಡ್ಕೊಂಡುಬಿಡು. ಇಲ್ಲೇ ಯಮನೂರಾಗ ನಮ್ಮ ಮಂದೀದು ಚೊಲೋ ಹುಡುಗಿ ಐತೆಂತ. ಈ ವಾರ ಒಂದು ಚೊಲೋ ದಿನ ನೋಡಿ ನೊಡ್ಕೊಂಡು ಬರಾನು. ನಿನಗ ಮನಸಿಗೆ ಬಂದ್ರ ದೇವರು ನಮ್ಮ ಪಾಲಿಗೆ ಬಂದಾಂಗ...' ಅಂತ ಪಾರಮ್ಮ ಆಗಲೇ ಮದುವೆ ಮಾಡುವ ಆತುರ ತೋರಿದಳು.

ಅವಳ ಮಾತಿಗೆ ಯಮನೂರಪ್ಪ ಹ್ಞೂಂಗುಟ್ಟಿದ. ಅವನೊಳಗೆ ಈ ಮದುವೆಯ ಕುರಿತ ಮಾತುಗಳೇ ಜವಾಬ್ದಾರಿ ಹುಟ್ಟಿಸುತ್ತಿರುವಂತೆ ಭಾಸವಾಗತೊಡಗಿತು. ಅಲ್ಲೇ ಇದ್ದ ತುಂಬಿದ ಚರಿಗೆ ಎತ್ತಿ ಗಟ ಗಟ ನೀರು ಕುಡಿದ. ಹಾಯೆನಿಸಿತು. ಯಮನೂರಪ್ಪನಿಗೆ ಅದೊಂದು ಚಾಳಿ ಇತ್ತು. ಚರಿಗೆ ನೀರನ್ನು ಯಾವತ್ತೂ ಸಾವಕಾಶ ಕುಡಿದ ಉದಾಹರಣೆಯೇ ಇಲ್ಲ. ನಾಕು ಮಂದಿಗೆ ಕೇಳಿಸುವಂತೆ ಗಟ ಗಟ ಶಬ್ದ ಮಾಡುವಂತೆ ಕುಡಿದರೇನೇ ಅವನ ಮನಸ್ಸಿಗೆ ಸಮಾಧಾನ. ಅಲ್ಲಿಂದ ಎದ್ದು ಹಿತ್ತಿಲ ಕಡೆ ನಡೆದ. ಹಿತ್ತಿಲು ಪಾರಮ್ಮನ ಕಾಳಜಿಯಿಂದಾಗಿ ಹಚ್ಚ ಹಸಿರಾಗಿತ್ತು. ಟೊಮೊಟೊ, ಬದನೆ, ಮೆಣಸಿನಗಿಡ, ಚವಳಿಕಾಯಿ ಗಿಡ, ಕರಿಬೇವು, ಕೊತ್ತಂಬರಿ, ನೆಲ್ಲಿಕಾಯಿ, ಪಪ್ಪಾಯಿಗಿಡ ಹುಲುಸಾಗಿ ಬೆಳೆದಿದ್ದವು. ಇವುಗಳನ್ನು ಒಂದೊಂದಾಗಿ ಕಣ್ತುಂಬಿಕೊಳ್ಳುತ್ತಾ ಸಾಗಿದಂತೆ ಚೆಂದ ಹಬ್ಬಿದ ಮಲ್ಲಿಗೆ ಗಿಡ ಕಾಣಿಸಿತು. ಆ ಮಲ್ಲಿಗೆ ಗಿಡದ ತುಂಬಾ ಮೊಗ್ಗುಗಳು ಸಾಲುಗಟ್ಟಿದ್ದವು. ಅದೊಂಥರ ಬಳ್ಳಿಯೇ ಹೂ ಮುಡಿದುಕೊಂಡಂತೆ ತೋರತೊಡಗಿತ್ತು. ಅವುಗಳನ್ನು ನೋಡುತ್ತಲೇ ಯಮನೂರಪ್ಪ ಹಿಗ್ಗಿ ಹೀರೆಕಾಯಿಯಾದ. ಒಂದೆರಡು ಮೊಗ್ಗು ಹರಿದುಕೊಂಡು ಅವುಗಳ ಸುವಾಸನೆ ಹೀರತೊಡಗಿದ. ನರ ನಾಡಿಗಳ ತುಂಬಾ ಖುಷಿ ಸಂಚರಿಸಿತು.

★★★

ಈ ಮಲ್ಲಿಗೆ ಗಿಡ ಯಮನೂರಪ್ಪನ ಅವ್ವ ಬೆಳೆಸಿದ್ದು. ಯಮನೂರಪ್ಪ ಇನ್ನೂ ಆಗ ಹಾಲುಗಲ್ಲದ ಕೂಸು. ಹಾಲು ಕುಡಿಸಿದರೂ ಯಮನೂರಪ್ಪ ಅಳು ನಿಲ್ಲಿಸುತ್ತಿರಲಿಲ್ಲ. ಕಣ್ಣಿಗೆ ಕಣ್ಣು ಹಚ್ಚಿ ನಿದ್ದೆ ಮಾಡುತ್ತಿರಲಿಲ್ಲ. ಪಾರಮ್ಮನಿಗೆ ಸಾಕೂ ಬೇಕೂ ಕೂಡೇ ಆಗಿತ್ತು. ಯಮನೂರು ಉರುಸಿಗೆ ಹೋಗಿ ಹರಕೆ ತೀರಿಸಿ ಬಂದು ಯಮನೂರಪ್ಪ ಅಂತ ಹೆಸರಿಟ್ಟರೂ ಅಳು ನಿಲ್ಲಿಸಲಿಲ್ಲ. ಐನಾರ ಹತ್ತಿರ ಅಂತ್ರ ಕಟ್ಟಿಸಿದಳು. ಕಂಡ ಕಂಡ ದೇವರಿಗೆಲ್ಲ ಹರಕೆ ಹೊತ್ತಳು. ಉಪವಾಸ ವ್ರತ ಮಾಡಿದಳು. ಇದ್ಯಾವುದೂ ಉಪಯೋಗಕ್ಕೆ ಬರಲಿಲ್ಲ. ಯಮನೂರಪ್ಪ ಮಾತ್ರ ಅಳುವನ್ನೇ ಉಸಿರಾಡುತ್ತಿದ್ದ. ಪಾರಮ್ಮ ಬೇಸತ್ತು ಬಿಟ್ಟಿದ್ದಳು.

ಒಂದಿನ ಪಲ್ಲೆ ಕೇಳಲು ಬಂದಿದ್ದ ಮಗ್ಗುಲ ಮನೆಯ ಹುಡುಗಿ ಅಳುತ್ತಿರುವ ಯಮನೂರಪ್ಪನನ್ನು ಎತ್ತಿಕೊಂಡು ರಮಿಸತೊಡಗಿದಳು. ಎಷ್ಟು ರಮಿಸಿದರೂ ಅಂವ ಸುಮ್ಮನಾಗಲಿಲ್ಲ. ಯಮನೂರಪ್ಪ ಕೊಸರಾಡುವಾಗ ಆ ಹುಡುಗಿ ಮುಡಿದಿದ್ದ ಮಲ್ಲಿಗೆ ಹೂ ಕೈಗೆ ಸಿಲುಕಿತು. ಹೂ ಹಿಡಿದುಕೊಂಡು ಅಳು ನಿಲ್ಲಿಸಿದ. ಆ ಹುಡುಗಿ, ಪಾರಮ್ಮ ಅಚ್ಚರಿಗೊಂಡರು. ಅವನ ಕೈಯೊಳಗಿನ ಮಲ್ಲಿಗೆ ಹೂ ಜಾರಿ ಕೆಳಗೆ ಬಿತ್ತು. ಮತ್ತೆ ಯಮನೂರಪ್ಪ ಅಳತೊಡಗಿದ. ಆ ಹುಡುಗಿ, ಪಾರಮ್ಮ ಅವನ ಕೈಗೆ ಮಲ್ಲಿಗೆ ಹೂವು ಕೊಟ್ಟರು. ಮಲ್ಲಿಗೆ ಹೂವು ಹಿಡಿದುಕೊಂಡು ನಗುತ್ತಾ ಆಡತೊಡಗಿದ. ಅಂದಿನಿಂದ ಅವನಿಗೆ ಯಾವ ಆಟಿಕೆ ಸಾಮಾನೂ ತರಲಿಲ್ಲ. ದಿನಾ ಮಲ್ಲಿಗೆ ಹೂ ಆಡಲು ಕೊಡತೊಡಗಿದರು. ಮಲ್ಲಿಗೆ ಹೂ ಇಲ್ಲದ ದಿನ ಯಮನೂರಪ್ಪನ ಅಳು ತಾರಕಕ್ಕೇರತೊಡಗಿತು. ಹಾಗಾಗಿ ದೇವರ